# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

ನಂ.16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003
Ph : 080-23564444, 23464033, 23464034
e-mail: ksccsfltd@gmail.com info@ksccsf.org www.ksccsf.org




## 2019–20ನೇ ಸಾಲಿನ ಸಾಮಾನ್ಯ ಸಭೆಯ ಕಾರ್ಯಸೂಚಿ, ವಾರ್ಷಿಕ ವರದಿ, ಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವರದಿ ಆರ್ಥಿಕ ತಃಖ್ತೆಗಳು ಹಾಗೂ ಬಜೆಟ್

**ಸಭೆ ನಡೆಯುವ ದಿನಾಂಕ : 22.12.2020**
**ಮಂಗಳವಾರ ಬೆಳಗ್ಗೆ 11.00 ಘಂಟೆಗೆ**

ಸ್ಥಳ :

**ಸಿಟ್ರಿನ್ ಹೋಟೆಲ್**

ನಂ. 211, ಎಸ್.ಸಿ. ರಸ್ತೆ, ಶೇಷಾದ್ರಿಪುರಂ
ಬೆಂಗಳೂರು – 560 020

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

ನಂ.16, 1ನೇ ಮಹಡಿ, 1ನೇ ಕ್ರಾಸ್, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003

## 16ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ. ಬೆಂಗಳೂರು ಇದರ **2019-20ನೇ** ಸಾಲಿನ 16ನೇ ವಾರ್ಷಿಕ ಸಾಮಾನ್ಯ ಸಭೆಯನ್ನು, ದಿನಾಂಕ:22.12.2020 ಮಂಗಳವಾರ ರಂದು ಕರ್ನಾಟಕ ಸರ್ಕಾರದ ಸ.ಇ43ಸಿಎಲ್. ಎಮ್ 2020(ಇ) ಬೆಂಗಳೂರು ಇವರ ಆದೇಶದಂತೆ ವಾರ್ಷಿಕ ಸಾಮಾನ್ಯ ಸಭೆಯನ್ನು ವಿಡಿಯೋ ಕಾನ್ಫರೆನ್ಸ್ / ವರ್ಚುಯಲ್ ಮೀಟಿಂಗ್ ಮೂಲಕ ಝೂಮ್ ವಿಡಿಯೋ ವೆಬಿನಾರ್ ತಂತ್ರಜ್ಞಾನವನ್ನು ಬಳಸಿಕೊಂಡು ಸಿಟ್ರಿನ್ ಹೋಟೆಲ್, ನಂ.211, ಎಸ್.ಸಿ ರಸ್ತೆ, ಶೇಷಾದ್ರಿಪುರಂ ಬೆಂಗಳೂರು 560020 ಇಲ್ಲಿ ಬೆಳಗ್ಗೆ 11.00 ಘಂಟೆಗೆ ಮಹಾಮಂಡಳದ **ಅಧ್ಯಕ್ಷರಾದ ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ** ಇವರ ಅಧ್ಯಕ್ಷತೆಯಲ್ಲಿ ಕಾರ್ಯಸೂಚಿಯಲ್ಲಿ ನಮೂದಿಸಿರುವ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನಿಸಲು ಸಭೆಯನ್ನು ಕರೆಯಲಾಗಿದೆ.

ಮಾನ್ಯ ಸದಸ್ಯ ಸಹಕಾರ ಸಂಘಗಳ ಪ್ರತಿನಿಧಿಗಳು ವಾರ್ಷಿಕ ಸಾಮಾನ್ಯ ಸಭೆಗೆ ತಮ್ಮ ಸಹಕಾರ ಸಂಘ ಇರುವ ಸ್ಥಳದಿಂದಲೇ ಕಂಪ್ಯೂಟರ್ / ಲ್ಯಾಪ್‌ಟಾಪ್/ ಮೊಬೈಲ್‌ಗಳ ಮೂಲಕ ಝೂಮ್ ವಿಡಿಯೋ ವೆಬಿನಾರ್ ಅಪ್ಲಿಕೇಷನ್ ಬಳಸಿ ಸಭೆಯಲ್ಲಿ ಹಾಜರಿರಲು ಕೋರಿದೆ.

| ಕ್ರ.ಸಂ. | **-:ಕಾರ್ಯಸೂಚಿ:-** | **ಪುಟ ಸಂಖ್ಯೆ** |
|---|---|---|
| 1 | ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು. | **1** |
| 2 | ದಿನಾಂಕ:19-09-2019 ರಂದು ನಡೆದ 15ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳನ್ನು ಸ್ಥಿರೀಕರಿಸುವುದು. | **03-28** |
| 3 | 2019-2020ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಶೀಲಿಸಿ ಅನುಮೋದಿಸುವುದು. | **29-36** |
| 4 | ಸನ್ನದು ಲೆಕ್ಕಪರಿಶೋಧಕರು ಪರಿಶೋಧಿಸಲ್ಪಟ್ಟ 2019-2020ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು, ಆರ್ಥಿಕ ಲೆಕ್ಕ ತಃಖ್ತೆಗಳನ್ನು ಹಾಗೂ ಆಡಳಿತ ಮಂಡಳಿ ನೀಡಿರುವ ಅನುಪಾಲನಾ ವರದಿಯನ್ನು ಅಂಗೀಕರಿಸುವುದು. | **37-92** |
| 5 | 2021-2022ನೇ ಸಾಲಿನ ಮುಂಗಡ ಪತ್ರ (ಆಯ-ವ್ಯಯ ಪಟ್ಟಿ) ಮಂಜೂರು ಮಾಡುವುದು ಮತ್ತು 2019-20ನೇ ಸಾಲಿಗೆ ಮಂಜೂರಾಗಿದ್ದ ಬಜೆಟ್‌ಗಿಂತ ಹೆಚ್ಚಿಗೆ ಖರ್ಚಾಗಿರುವ ಖಾತೆಗಳ ಮೊಬಲಗಿಗೆ ಅನುಮೋದನೆ ನೀಡುವುದು. | **93-95** |
| 6 | 2020-2021ನೇ ಸಾಲಿನ ಲೆಕ್ಕಪರಿಶೋಧನಾ ನಿರ್ವಹಣೆಗೆ ಸನ್ನದು ಲೆಕ್ಕಪರಿಶೋಧಕರನ್ನು ನೇಮಕ ಮಾಡುವುದು ಮತ್ತು ಅವರಿಗೆ ಸಂಭಾವನೆಯನ್ನು ನಿಗದಿಪಡಿಸುವುದು. | **96** |
| 7 | 2019-20ನೇ ಸಾಲಿನ ಹೆಚ್ಚುವರಿ ಉಳಿಕೆ ಮೊಬಲಗನ್ನು ವಿಲೇವಾರಿ ಮಾಡುವುದು. | **96** |
| 8 | ಹೊಸದಾಗಿ ಸೇರಿಸಿಕೊಂಡ ಸದಸ್ಯ ಸಂಘಗಳ ಪಟ್ಟಿಯನ್ನು ಪರಿಶೀಲಿಸುವುದು. | **97** |
| 9 | ನಿಧಿಗಳ ವಾಸ್ತವಿಕ ಬಳಕೆಯ ಬಗ್ಗೆ ಪರಿಶೀಲಿಸುವುದು. | **97** |
| 10 | ಮಹಾಮಂಡಳದ ಬೈಲಾ ತಿದ್ದುಪಡಿ ಬಗ್ಗೆ ಪರಿಶೀಲಿಸಿ ಅನುಮೋದಿಸುವುದು. | **98-130** |
| 11 | ಸದಸ್ಯ ಸಂಘಗಳ ಪ್ರತಿನಿಧಿಗಳಿಂದ ಬಂದ ಸಲಹೆ/ಸೂಚನೆಗಳನ್ನು ಪರಿಶೀಲಿಸುವುದು. | - |
| 12 | ಇತರೆ ವಿಷಯಗಳ ಬಗ್ಗೆ ಚರ್ಚೆ ಮತ್ತು ತೀರ್ಮಾನ. | - |

ಆಡಳಿತ ಮಂಡಳಿ ಅನುಮತಿ ಮೇರೆಗೆ

ಸಹಿ/-

**ಪಿ.ಆಶಾಲತಾ**

ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

ಸ್ಥಳ : ಬೆಂಗಳೂರು

ದಿನಾಂಕ : 27-11-2020

## ವಿಶೇಷ ಸೂಚನೆಗಳು

1. ಪ್ರತಿನಿಧಿಗಳು ಮಹಾಮಂಡಳದ ಕಾರ್ಯಚಟುವಟಿಕೆ ಮತ್ತು ಆರ್ಥಿಕ ಲೆಕ್ಕತಃಖ್ತೆಗಳಲ್ಲಿನ ಮಾಹಿತಿ ಕುರಿತು ಸ್ಪಷ್ಟೀಕರಣ ಬಯಸಿದ್ದಲ್ಲಿ ಸಾಮಾನ್ಯ ಸಭೆಗೆ 7 ದಿನಗಳ ಮುಂಚಿತವಾಗಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಯವರಿಗೆ ಅರ್ಜಿ ಸಲ್ಲಿಸಿರಬೇಕು.

2. ತಮ್ಮ ಸಂಘದ ನೋಂದಣಿ ವಿಳಾಸ ಬದಲಾವಣೆ ಆಗಿದ್ದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ವಿಳಾಸವನ್ನು ಮಹಾಮಂಡಳಕ್ಕೆ ಲಿಖಿತ ಮೂಲಕ ನೀಡುವುದು.

3. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಕಾಯ್ದೆ 2012 ಕಲಂ 27(ಎ)ಮತ್ತು ಬೈಲಾ ನಂ.10ರಂತೆ ಹಿಂದಿನ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಮೂರು ಮಹಾಸಭೆಗಳಿಗೆ ಗೈರುಹಾಜರಾಗುವ ಮತ್ತು ಮಹಾಮಂಡಳವು ನೀಡುವಂತಹ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪ್ರತಿವರ್ಷ ಬಳಸಿಕೊಳ್ಳದ ಸದಸ್ಯ ಸಂಘಗಳ ಪ್ರತಿನಿಧಿಗಳು ಮಹಾಮಂಡಳದ ವ್ಯವಸ್ಥಾಪನೆಯಲ್ಲಿ ಪಾಲ್ಗೊಳ್ಳುವ ಹಕ್ಕನ್ನು ಕಳೆದುಕೊಳ್ಳಬೇಕಾಗುತ್ತದೆ. ಆದಕಾರಣ ಸದಸ್ಯ ಸಂಘಗಳ ಪ್ರತಿನಿಧಿಗಳು ಮಹಾಮಂಡಳದ ಎಲ್ಲಾ ವಾರ್ಷಿಕ ಸಾಮಾನ್ಯಸಭೆಯಲ್ಲಿ ಕಡ್ಡಾಯವಾಗಿ ಭಾಗವಹಿಸಿ, ಮಹಾಮಂಡಳ ನೀಡುವ ಕನಿಷ್ಠ ಸೇವೆಗಳನ್ನು ಹಾಗೂ ಸೌಲಭ್ಯಗಳನ್ನು ಬಳಸಿಕೊಳ್ಳುವುದು.

4. ಸದಸ್ಯ ಸಂಘಗಳಿಗೆ ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿ., ಬೆಂಗಳೂರು ಇದರ ಮೂಲಕ ಇ-ಸ್ಟಾಂಪಿಂಗ್ ಪರವಾನಗಿ ಮಂಜೂರು ಮಾಡಿಸಿಕೊಡುತ್ತಿದ್ದು, ಸದಸ್ಯ ಸಂಘಗಳ ಪದಾಧಿಕಾರಿಗಳು ಮಹಾಮಂಡಳದ ಕಛೇರಿಯಲ್ಲಿ ಮಾಹಿತಿ ಪಡೆದುಕೊಂಡು ಇ-ಸ್ಟಾಂಪಿಂಗ್ ಪರವಾನಗಿ ಪಡೆದುಕೊಳ್ಳುವುದು.

5. **ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ.21(2)(ಎ)ರಂತೆ ಆಡಳಿತ ಮಂಡಳಿ ಸದಸ್ಯರು ಮಾತ್ರ ವಾರ್ಷಿಕ ಸಾಮಾನ್ಯ ಸಭೆಗೆ ಭಾಗವಹಿಸಲು ಅವಕಾಶವಿರುತ್ತದೆ. ಬೇರೆಯವರಿಗೆ ಅವಕಾಶವಿರುವುದಿಲ್ಲ.**

6. ಮಹಾಮಂಡಳದ ವಾರ್ಷಿಕ ಸಾಮಾನ್ಯ ಸಭೆಗೆ ವಿಡಿಯೋ ಕಾನ್ಫೆರೆನ್ಸ್ ಮುಖಾಂತರ ಭಾಗವಹಿಸಲು ಇಚ್ಛಿಸುವ ಸಹಕಾರ ಸಂಘಗಳ ಸದಸ್ಯರು ಈ ಕೆಳಕಂಡ ಲಿಂಕ್‌ಗೆ ವಿವರಗಳನ್ನು ನೋಂದಣಿ ಮಾಡುವ ಮುಖಾಂತರ ಲಾಗಿನ್ ಆಗಿ ಸಭೆಗೆ ಹಾಜರಾಗಬಹುದು.
https://bit.ly/KSCCSFLagm2020

ಆಡಳಿತ ಮಂಡಳಿ ಅನುಮತಿ ಮೇರೆಗೆ
ಸಹಿ/-
**ಪಿ.ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

ಸ್ಥಳ: ಬೆಂಗಳೂರು
ದಿನಾಂಕ:27- 11-2020

**ವಿಡಿಯೋ ಕಾನ್ಫರೆನ್ಸ್/ ವರ್ಚುಯಲ್ 16ನೇ ವಾರ್ಷಿಕ ಸಾಮಾನ್ಯ ಸಭೆಗೆ ಹಾಜರಾಗುವ ಸಹಕಾರ ಸಂಘದ ಪ್ರತಿನಿಧಿಗಳು ಗಮನಿಸಬೇಕಾದ ಅಂಶಗಳು.**

1. ಪ್ರತಿವರ್ಷ ನಡೆಯುವ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವ ಎಲ್ಲಾ ಅರ್ಹ ಸದಸ್ಯ ಸಹಕಾರ ಸಂಘಗಳ ಡೆಲಿಗೇಟುಗಳು ಸಭೆಯ ಕಾರ್ಯಸೂಚಿ ಮತ್ತು ಟಿಪ್ಪಣಿಯನ್ನು ಅಧ್ಯಯನ ಮಾಡಿಕೊಂಡು ತಂತ್ರಜ್ಞಾನವನ್ನು ಬಳಸಿಕೊಂಡು ತಾವಿರುವ ಸ್ಥಳದಲ್ಲಿಯೇ ಭಾಗವಹಿಸುವ ಮೂಲಕ ಸಭೆಯನ್ನು ಯಶಸ್ವಿಗೊಳಿಸಲು ಕೋರಿದೆ.
2. ನೋಟೀಸಿನೊಂದಿಗೆ ಕಳುಹಿಸಿರುವ ಲಿಂಕ್ ಹಾಗೂ ಐಡಿಯನ್ನು ಬಳಸಿ ಸಹಕಾರ ಸಂಘದ ಪ್ರತಿನಿಧಿಗಳು ಆನ್‌ಲೈನ್ ವಾರ್ಷಿಕ ಸಾಮಾನ್ಯ ಸಭೆಗೆ ಲಾಗಿನ್ ಆಗಬೇಕಾಗುತ್ತದೆ. ನಂತರದಲ್ಲಿ ಪ್ರತಿನಿಧಿಯ ವಿವರ ಕಳುಹಿಸಿದ ಅರ್ಜಿಯಲ್ಲಿ ಪ್ರತಿನಿಧಿಯ ಇಮೇಲ್ ಐಡಿ ಹಾಗೂ ಮೊಬೈಲ್ ಸಂಖ್ಯೆಯನ್ನು ನಮೂದಿಸಿ ಅನ್‌ಲೈನ್ ಸಭೆಗೆ ಹಾಜರಾಗಬಹುದಾಗಿರುತ್ತದೆ.
3. ಸಹಕಾರ ಸಂಘದ ವಾರ್ಷಿಕ ಸಾಮಾನ್ಯ ಸಭೆಗೆ ಹಾಜರಾಗುವ ಸದಸ್ಯರು, ತಾವು ಪ್ರತಿನಿಧಿಸುತ್ತಿರುವ ಸಹಕಾರ ಸಂಘವು ಮಹಾಮಂಡಳದಲ್ಲಿ ಹೊಂದಿರುವ ಸದಸ್ಯತ್ವ ಸಂಖ್ಯೆ ಹಾಗೂ ತಮ್ಮ ಹೆಸರನ್ನು ಹಾಜರಾತಿಗಾಗಿ ನಮೂದಿಸಬೇಕು.
4. ಸಹಕಾರ ಸಂಘದ ಪ್ರತಿನಿಧಿಗಳು ಉತ್ತಮ ಇಂಟರ್‌ನೆಟ್ ಸೌಲಭ್ಯವನ್ನು ಹೊಂದಿರುವ ಲ್ಯಾಪ್ ಟಾಪ್/ ಡೆಸ್ಕ್‌ಟಾಪ್/ಮೊಬೈಲ್ ಬಳಸಿ ವಾರ್ಷಿಕ ಸಾಮಾನ್ಯ ಸಭೆಗೆ ನಿಗದಿತ ಅವಧಿಗಿಂತ ಒಂದು ಘಂಟೆ ಮುಂಚೆ ಲಾಗಿನ್ ಆಗುವ ಮೂಲಕ ಹಾಜರಾಗುವುದು.
5. ಸಭೆಯಲ್ಲಿ ಪ್ರಶ್ನೆ ಕೇಳಬಯಸುವ ಸದಸ್ಯರು ದಿನಾಂಕ : 15.12.2020ರೊಳಗೆ ತಲುಪುವಂತೆ ಲಿಖಿತವಾಗಿ ಪ್ರಶ್ನೆಗಳನ್ನು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿಯವರಿಗೆ ksccsfltd@gmail.com ಇಮೇಲ್ ಐಡಿಗೆ ಕಳುಹಿಸಬೇಕು. ಮುಂಚಿತವಾಗಿ ಬಂದಿರುವ ಪ್ರಶ್ನೆಗಳಿಗೆ ಮಾತ್ರ ಸಭೆಯಲ್ಲಿ ಉತ್ತರಿಸಲಾಗುವುದು. ಆನ್‌ಲೈನ್ ಸಭೆಯಾಗಿರುವುದರಿಂದ ಸಭೆಯ ಸಂದರ್ಭದಲ್ಲಿ ಹೆಚ್ಚಿನ ಪ್ರಶ್ನೋತ್ತರಕ್ಕೆ ಅವಕಾಶ ಸಾಧ್ಯವಾಗದಿರಬಹುದು. ಆದಾಗ್ಯೂ ಚರ್ಚೆಯಲ್ಲಿ ಭಾಗವಹಿಸುವ ಅಥವಾ ಪ್ರಶ್ನೆ ಕೇಳಲು ಇಚ್ಚಿಸುವ ಸದಸ್ಯರು 'ರೈಸ್ ಹ್ಯಾಂಡ್' ಆಯ್ಕೆ ಅಥವಾ 'ಚಾಟ್' ಆಯ್ಕೆ ಬಳಸಿ ಸಭೆಯ ಸಂದರ್ಭದಲ್ಲಿ ತಮ್ಮ ಪ್ರಶ್ನೆ ಕೇಳಬಹುದಾಗಿದೆ.
6. ಸಭೆಯಲ್ಲಿ ಭಾಗವಹಿಸುವ ಪ್ರತಿನಿಧಿಗಳಿಗೆ, ಸಭೆಯ ಕಾರ್ಯಕಲಾಪದಲ್ಲಿ ಭಾಗವಹಿಸಿ, ಚರ್ಚೆಗಳನ್ನು ಕೇಳಲು, ಪ್ರೆಸೆಂಟೇಶನ್ ನೋಡಲು ಅವಕಾಶವಿರುತ್ತದೆ.

ಈ ಮೇಲ್ಕಂಡ ವಿವರಗಳನ್ನು ಗಮನದಲ್ಲಿರಿಸಿಕೊಂಡು ಮಹಾಮಂಡಳದ ವಿಡಿಯೊ ಕಾನ್ಫರೆನ್ಸ್ / ವರ್ಚುಯಲ್ ಮೀಟಿಂಗ್ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವ ಮೂಲಕ ಸಭೆಯನ್ನು ಯಶಸ್ವಿಗೊಳಿಸಲು ಮತ್ತೊಮ್ಮೆ ಕೋರಿದೆ.

ಆಡಳಿತಮಂಡಳಿ ಅನುಮತಿ ಮೇರೆಗೆ

ವಂದನೆಗಳೊಂದಿಗೆ,

ಸಹಿ/-

(ಆಶಾಲತಾ.ಪಿ)

ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)